# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಸದಸ್ಯರ ಹೆಸರು** : ಶ್ರೀ ಡಿ.ಎಸ್. ಅರುಣ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ
ಚುನಾಯಿತರಾದವರು)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 567

**ಉತ್ತರಿಸಬೇಕಾದ ಸಚಿವರು** : ಕೃಷಿ ಸಚಿವರು

**ಉತ್ತರಿಸಬೇಕಾದ ದಿನಾಂಕ** : 08-12-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **(ಅ)** | ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕಡಿಮೆ ನೀರು ಬಳಕೆ ಮಾಡಿ ಏರೋಬಿಕ್ ರೈಸ್ (Aerobic Rice) ವ್ಯವಸಾಯ ಮಾಡುವ ಕುರಿತು ಸಂಶೋಧನೆಗಳನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಈ ಸಂಶೋಧನೆಗಳನ್ನು ಪ್ರಯೋಗಾತ್ಮಕವಾಗಿ ಕಾರ್ಯರೂಪಕ್ಕೆ ತಂದು ಏರೋಬಿಕ್ಸ್ ರೈಸ್ ಬೆಳೆಸಲು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಂಡಿದೆಯೇ; (ವಿವರ ಒದಗಿಸುವುದು) | ಹೌದು. ಬೆಂಗಳೂರು ಮತ್ತು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕಡಿಮೆ ನೀರು ಬಳಕೆ ಮಾಡಿ ಅರೆ ನೀರಾವರಿ ಪದ್ಧತಿಯಲ್ಲಿ ಏರೋಬಿಕ್ ರೈಸ್ ಬೇಸಾಯ ಮಾಡುವ ಕುರಿತು ಸಂಶೋಧನೆಗಳು ನಡೆದು MAS 946-1 ಮತ್ತು MAS - 26 ಎಂಬ ಎರಡು ಏರೋಬಿಕ್ ಭತ್ತದ ತಳಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಏರೋಬಿಕ್ ಪದ್ಧತಿಯಲ್ಲಿ ಉತ್ತಮ ಇಳುವರಿ ನೀಡುವಂತಹ ARB-6 (Anagha), MAS-26 ಮತ್ತು MAS-946-1 ಎಂಬ ಭತ್ತದ ತಳಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ರಾಯಚೂರು, ಮಾನವಿ, ಪ್ರದೇಶಗಳಲ್ಲಿ ಏರೋಬಿಕ್ ರೈಸ್ ಪದ್ಧತಿಗೆ ಬದಲಾಗಿ ಶೇ. 17-35% ರಷ್ಟು ಕಡಿಮೆ ನೀರು ಉಪಯೋಗಿಸಿ ನೇಖ ಕೂರಿಗೆ ಬಿತ್ತನೆ (Direct Seeded Rice) ಮೂಲಕ ಸುಮಾರು 1 ಲಕ್ಷ ಎಕರೆ ಪ್ರದಶದಲ್ಲಿ ಕಡಿಮೆ ನೀರನ್ನು ಬಳಸಿ ಭತ್ತದ ಬಿತ್ತನೆ ಮಾಡಲಾಗುತ್ತಿದೆ. |
| **(ಆ)** | ಕಡಿಮೆ ನೀರು ಬಳಕೆ ಮಾಡಿ ಏರೋಬಿಕ್ ರೈಸ್ ಬೆಳೆಯುವುದರಿಂದ ಕಡಿಮೆ ವೆಚ್ಚದಲ್ಲಿ ಭತ್ತ ಉತ್ಪಾದನೆಯಾಗಿ ರೈತರಿಗೆ ಹೆಚ್ಚಿನ ಲಾಭವಾಗುವುದರಿಂದ ಸರ್ಕಾರ ಈ ನಿಟ್ಟಿನಲ್ಲಿ ಪ್ರೋತ್ಸಾಹ ನೀಡಲು ಕಾರ್ಯ ಯೋಜನೆಗಳನ್ನು ರೂಪಿಸುವುದೆ; (ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ಅಕ್ಕಿ ಕಾರ್ಯಕ್ರಮವನ್ನು ರಾಜ್ಯದ 7 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. 2023-24 ನೇ ಸಾಲಿಗೆ 400 ಹೆ ಪ್ರದೇಶದಲ್ಲಿ ಅನುಷ್ಠಾನಕ್ಕೆ ಯೋಜಿಸಲಾಗಿದೆ. ರೂ 9000/- ಪ್ರತಿ ಹೆಕ್ಟೇರ್ ಪ್ರದೇಶಕ್ಕೆ ಪರಿಕರಗಳನ್ನು ಒದಗಿಸಿ, ಮಾಹಿತಿ ನೀಡುವುದರ ಮೂಲಕ ರೈತರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. (ಜಿಲ್ಲಾವಾರು ವಿವರ **ಅನುಬಂಧ -1 ರಲ್ಲಿ** ಒದಗಿಸಿದೆ) |

......2

| | | |
|---|---|---|
| **(ಇ)** | ಏರೋಬಿಕ್ ರೈಸ್ ಬೆಳೆಸಲು ಪ್ರೋತ್ಸಾಹ ನೀಡುವುದರ ಜೊತೆಗೆ ಕಾರ್ಬನ್ ಟ್ರೇಡಿಂಗ್‌ಗೆ ಅವಕಾಶ ಮಾಡಿಕೊಡುವುದರಿಂದ ರೈತರ ಆದಾಯ ಹೆಚ್ಚಿಸಲು ಸಾಧ್ಯವಿದೆಯೇ; ಹಾಗಿದ್ದಲ್ಲಿ, ಸರ್ಕಾರದ ಯೋಜನೆಗಳೇನು? | ಹರಿ ನೀರಾವರಿ (Flooded Irrigation) ಬದಲಾಗಿ ಏರೋಬಿಕ್ ರೈಸ್ ಪದ್ಧತಿಯಲ್ಲಿ ಭತ್ತ ಬೆಳೆಯುವುದರಿಂದ, ಹೆಚ್ಚಿನ ಕಾರ್ಬನ್ ಟ್ರೇಡಿಂಗ್ ಮಾಡಿ ರೈತರ ಆದಾಯ ಹೆಚ್ಚಿಸಬಹುದಾಗಿದೆ. ಡಿಸೆಂಬರ್ 2022ರಲ್ಲಿ ಕೇಂದ್ರ ಸರ್ಕಾರ ಈ ಕುರಿತು "The Energy Conservation Amendment Bill, 2022" ನ್ನು ಪ್ರಕಟಿಸಿದೆ. ಈ ಮೂಲಕ ಕಾರ್ಬನ್ ಕ್ರೆಡಿಟಿಂಗ್ ಹಾಗೂ ಕಾರ್ಬನ್ ಟ್ರೇಡಿಂಗ್ ಮಾಡಿ ರೈತರ ಆದಾಯ ಹೆಚ್ಚಿಸಲು ಅವಕಾಶವಿದೆ. ರಾಜ್ಯದಲ್ಲಿ ಸರ್ಕಾರದ ಮಟ್ಟದಲ್ಲಿ ಕಡಿಮೆ ನೀರು ಬಳಕೆ ಮಾಡಿ ಕೃಷಿ ಅರಣ್ಯ ಹಾಗೂ ಸಮಗ್ರ ಕೃಷಿ ಪದ್ಧತಿಯನ್ನು ಬಳಸಿ ಬೇಸಾಯವನ್ನು ಈಗಾಗಲೇ ಪ್ರೋತ್ಸಾಹಿಸಲಾಗುತ್ತಿದೆ. ನೇರವಾಗಿ ಕಾರ್ಬನ್ ಟ್ರೇಡಿಂಗ್ ಕುರಿತು ಪ್ರಸ್ತುತ ಯಾವುದೇ ಯೋಜನೆಗಳಿರುವುದಿಲ್ಲ. |

ಇ-ಸಂಖ್ಯೆ: AGRI/105/AUM/2023

6/12

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ - 1

2023 - 2024 ನೇ ಸಾಲಿನ ಆಹಾರ ಮತ್ತು ಪೌಷ್ಠಿಕ ಭದ್ರತೆ - ಅಕ್ಕಿ ಯೋಜನೆಯಡಿ ಭತ್ತದ ಬೆಳೆಯಲ್ಲಿ ನೇರ ಬಿತ್ತನೆ ಪ್ರಾತ್ಯಕ್ಷಿಕೆ ಘಟಕದ ಜಿಲ್ಲಾವಾರು ಕಾರ್ಯಕ್ರಮ
(ಭೌತಿಕ: ಹೆಕ್ಟೇರ್ - ಆರ್ಥಿಕ: ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಗಳು | ಗುರಿ | | ಪ್ರಗತಿ (ನವೆಂಬರ್ ಅಂತ್ಯದವರೆಗೆ) | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬೆಳಗಾವಿ | 110 | 9.90 | 109 | 3.12 |
| 2 | ದಕ್ಷಿಣ ಕನ್ನಡ | 25 | 2.25 | 24 | 1.62 |
| 3 | ಹಾವೇರಿ | 80 | 7.20 | 80 | 1.91 |
| 4 | ಶಿವಮೊಗ್ಗ | 70 | 6.30 | 68 | 2.25 |
| 5 | ಉಡುಪಿ | 30 | 2.70 | 30 | 0.52 |
| 6 | ಉತ್ತರಕನ್ನಡ | 85 | 7.65 | 85 | 1.00 |
| 7 | ಯಾದಗಿರಿ | 00 | 0.0 | 0 | 0.00 |
| | ಒಟ್ಟು | **400** | **36.00** | **396** | **10.42** |

ಕೃಷಿ ನಿರ್ದೇಶಕರು